ವರ್ಗದ ಸ್ಯಾನಿಟೇಷನ್, ಮುನಿಸಿಪಲ್ ಸೇವೆಗಳು ಹಾಗೂ ವಾರ್ಡ್‌ನ್‌ಗಳು, ಅಡಿಗೆಯವರು ಮತ್ತು ಅಡಿಗೆ ಮನೆ ಸಿಬ್ಬಂದಿ ಮತ್ತು ಗ್ರೂಪ್ "ಡಿ" ನೌಕರರ ಸೇವೆಗಳನ್ನು ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ 1994ರ ಅಡಿಯಲ್ಲಿ ತರುವುದು"

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ರಾಜ್ಯದ ಸರ್ಕಾರಿ ವೈದ್ಯರ, ಇಎಸ್‌ಐ, ಆಸ್ಪತ್ರೆಗಳ ವೈದ್ಯರ ಹಾಗೂ ಸಿಬ್ಬಂದಿ ವರ್ಗದ ಸ್ಯಾನಿಟೇಷನ್, ಮುನಿಸಿಪಲ್ ಸೇವೆಗಳು ಹಾಗೂ ವಾರ್ಡನ್‌ಗಳು, ಅಡಿಗೆಯವರು ಮತ್ತು ಅಡಿಗೆ ಮನೆ ಸಿಬ್ಬಂದಿ ಮತ್ತು ಗ್ರೂಪ್ "ಡಿ" ನೌಕರರ ಸೇವೆಗಳನ್ನು ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ 1994ರ ಅಡಿಯಲ್ಲಿ ತರುವುದು"

ಪ್ರಸ್ತಾಪ ಮಂಡಿಸಲಾಯಿತು

ಶ್ರೀ ಭೈರೇಗೌಡ. ಸಿ.: ಬಿಎಸಿ ಕಮಿಟಿಯಲ್ಲಿ ಏನು ಚರ್ಚೆಯಾಗಿ ತಾವು ಒಪ್ಪಿಕೊಂಡಿದ್ದೀರಿ, ಅದರಂತೆಯೇ ನಾವು ಇಲ್ಲಿ ತರುತ್ತಿರುವುದು, ದಯಮಾಡಿ ಇದನ್ನು ಪಾಸ್ ಮಾಡಿಕೊಡಬೇಕು.

ಅಧ್ಯಕ್ಷರು : ತಮ್ಮ ಸಲಹೆಯಂತೆ ಬಿಎಸಿ ಕಮಿಟಿಯಲ್ಲಿ ಬಿಡಿಎ ಬಿಲ್ ಬಗ್ಗೆ ಚರ್ಚೆ ಮಾಡಿ ಅದನ್ನು ಮಾಡಿಕೊಡೋಣ ಎಂದು ತಾವು ಹೇಳಿದಿರಿ, ಇದು ಅತ್ಯಾವಶ್ಯಕವಾಗಿ ಆಗಲೇ ಬೇಕಾದ ಬಿಲ್ ಆಗಿರುವುದರಿಂದ, ಬಿಎಸಿಯಲ್ಲಿ ತಮಗೆಲ್ಲಾ ಕ್ಲಾರಿಫಿಕೇಷನ್ ಕೊಟ್ಟು, even we had called the minister and also the BD chairman ಅವರು ಎಲ್ಲಾ ವಿವರಣೆ ಕೊಟ್ಟಿದ್ದಾರೆ. ನೀವು ಒಪ್ಪವುದಾದರೆ ಸ್ವಲ್ಪ ಸಮಯ ಸಭೆಯನ್ನು ಮುಂದಕ್ಕೆ ಹಾಕಿ ಊಟ ಮಾಡಿಕೊಂಡು ಬರೋಣ, ತಮ್ಮ ಧರಣಿ ಕೂಡ ಮುಕ್ತಾಯವಾಗಿರುತ್ತದೆ. ಇದರ ಬಗ್ಗೆ ಚರ್ಚೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ್ದು ಚರ್ಚೆಯಾಗಿರುವುದರಿಂದ ಇದನ್ನು ತೆಗೆದುಕೊಳ್ಳಬಹುದು ಏನೂ ತೊಂದರೆಯಿಲ್ಲ.

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ನೇರವಾಗಿ ಸೊಮೋಟೊ ಆಗಿ ಮಾಡವುದಕ್ಕೆ ಬರುವುದಿಲ್ಲ. ಇದಕ್ಕೆ ಸರ್ಕಾರ ಒಪ್ಪಬೇಕು.

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಸೂದೆಗೆ ಇವತ್ತೇ ಒಪ್ಪಿಗೆ ತೆಗೆದುಕೊಳ್ಳಬಹುದು. ಇದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಇದರ ಬಗ್ಗೆ ಹೌಸ್ ಕಮಿಟಿ ಮಾಡುವುದಕ್ಕೆ ಯೋಗ್ಯ ಇದೆಯೋ ಅಥವಾ ಇಲ್ಲವೋ ಎನ್ನುವುದಕ್ಕೆ ಎಲ್ಲಾ ರೆಕಾರ್ಡ್ಸ್ ತರಿಸಿ, ಎಲ್ಲರನ್ನೂ ಕರೆಸಿ, ನಿರ್ಧಾರ ಮಾಡಿದ ನಂತರ then you come to the conclusion.

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, I am overburdened with several things ನನಗೆ ಆ ಜವಾಬ್ದಾರಿ ಹಾಕಬೇಡಿ.

SRI J.H.PATEL : They want me to convince you with all the concerned documents. I am prepared because I have no hesitation.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಕನ್‌ವಿನ್ಸ್ ಮಾಡಿ ಎಂದು ನಾನು ಹೇಳಲಿಲ್ಲ. ಅವರ ಕೋಣೆಯಲ್ಲಿ ಎಲ್ಲರನ್ನು ಕರೆಸಿ, ರೆಕಾರ್ಡ್ಸ್ ತರಿಸಿಕೊಂಡು, it is not necessary to constitute a House Committee ಎಂದು ಹೇಳಿದರೆ ನಂತರ ನೋಡೋಣ. ಇವತ್ತು ಸದನ ಸಮಿತಿ ಏಕೆ ಬೇಕು ಎಂದರೆ, ಒಂದು ಕಡೆ ತಾವು ಬೇಡ ಎಂದು ಹೇಳಿದರೆ ಮತ್ತೊಂದು ಕಡೆ ನಾವು ಬೇಕು ಎಂದು ಹೇಳುತ್ತೇವೆ. ಆದರೆ ಇವತ್ತು ಎಲ್ಲಾ ಮಾಧ್ಯಮದವರು ನಮ್ಮನ್ನು ವಾಚ್ ಮಾಡುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಖರ್ಗೆಯವರು ಹೇಳುವುದರಲ್ಲಿ ಏನಾದರೂ ಸತ್ಯಾಂಶ ಇದೆ ಎಂದು ಕಂಡು ಕಮಿಟಿ ಮಾಡುತ್ತೇವೆ ಎಂದರೆ ನನ್ನದೇನೂ ಅಭ್ಯಂತರವಿಲ್ಲ. ನಿಮಗೆ ಬೇಕಾದರೆ ಎಲ್ಲಾ ಡಾಕ್ಯುಮೆಂಟ್ಸ್ ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾಳೆ ಪವಿತ್ರವಾದ ದಿನ, ತಾವು ಅದಕ್ಕೆ ಹೋಗುತ್ತೀರಿ, ಅವರೆಲ್ಲರೂ ಮಾಡುತ್ತಿದ್ದುದು, ಎಲ್ಲಾ ಅಂಶಗಳು ಬರುತ್ತವೆ. ಇದರ ಜೊತೆಗೆ ನಾನು 1500 ಬೈವಾಟರ್‌ಗೆ ಸಂಬಂಧಪಟ್ಟಂತೆ ಏಕೆ ಮನ್ನಣೆ ಕೊಡಲಿಲ್ಲ ಎನ್ನುವ ಪ್ರಶ್ನೆ ಕೂಡ ಬರುತ್ತಿದೆ. ನಾವು ಬೈವಾಟರ್ ಕಂಟ್ರಾಕ್ಟ್ ಬಗ್ಗೆ ಇಲ್ಲಿ ಪ್ರಸ್ತಾಪಿಸಿ ಸದನ ಸಮಿತಿ ಮಾಡಿ ಎಂದು ಪದೇ ಪದೇ ಏಕೆ ಕೇಳುತ್ತಿದ್ದೇವೆಂದರೆ, ಮೊದಲನೆಯದಾಗಿ ಮಾಧ್ಯಮಗಳಲ್ಲಿ ಇದರ ಬಗ್ಗೆ ಸಾಕಷ್ಟು ಪ್ರಚಾರವಾಗಿದೆ. ಶಾಸಕರು, ಮೇಲ್ಮನೆಯಲ್ಲಿ ಹಾಗೂ ಹೊರಗಡೆ ಇದೇ ವಿಷಯ ಮಾತನಾಡುತ್ತಿರುವುದರಿಂದ ಜನರಲ್ಲಿ ಒಂದು ರೀತಿಯ ಗೊಂದಲ ಸೃಷ್ಟಿಯಾಗಿದೆ. ಆಂತರಿಕವಾಗಿ ಕೂಡ ಅವರ ಸ್ವಂತ ಕಾರ್ಯದರ್ಶಿಗಳು ಹಾಗೂ ಜನಗಳಿಗೆ ಒಂದು ರೀತಿಯ ಸಂಶಯಕ್ಕೆ ಎಡೆ ಮಾಡಿ ಕೊಡುವಂತೆ ಹಲವು ನಡವಳಿಕೆಗಳು, ಪತ್ರವ್ಯವಹಾರಗಳು, ಪ್ರೊಸೀಡಿಂಗ್ಸ್‌ಗಳು, ಆಗಿವೆ. ಇದು ಎಲ್ಲಾ ರೀತಿಯಿಂದಲೂ ನಿವಾರಣೆ ಆಗಬೇಕು, ಇದು ಇಂಪಾರ್ಸ್‌ಲ್‌ನಿಂದ ಉಂಟಾಗಿರತಕ್ಕಂಥ ಕಂಟ್ರಾಕ್ಟ್, ಇದರಲ್ಲಿ ಯಾವುದೇ ಅಡೆತಡೆಗಳು ಇಲ್ಲ, ಇದರಲ್ಲಿ ಯಾವ ಅವ್ಯವಹಾರ ಇಲ್ಲ ಎನ್ನತಕ್ಕಂಥದ್ದು ಸಾಬೀತಾಗಬೇಕಾದರೆ ಒಂದು ಸದನದ ಸಮಿತಿ ಮಾಡಿ. ಏಕೆಂದರೆ, ಇದರಲ್ಲಿ ಏನೂ ನಮ್ಮ ಕಮಿಟ್‌ಮೆಂಟ್ ಇಲ್ಲ. ಅಗ್ರಿಮೆಂಟ್ ಇಲ್ಲ ಎಂದು ತಾವು ಹೇಳುತ್ತೀರಿ. ಈ ರೀತಿ ಇದ್ದಾಗ ಒಂದು ಸದನ ಸಮಿತಿ ಮಾಡಿ ಮೂರು ತಿಂಗಳಲ್ಲಿ ವರದಿ ಕೊಡುವಂತೆ ಹೇಳಿ, ಏಕೆಂದರೆ, ತಕ್ಷಣದಲ್ಲಿ ಆ ಸ್ಕೀಮ್ ಏನು ರೆಡಿಯಾಗುವುದಿಲ್ಲ.

ಅಧ್ಯಕ್ಷರು : ತಾವು ಎಲ್ಲಾ ಹಿರಿಯರು ಇದ್ದೀರಿ. In matters like this, suomoto the Chair cannot take a decision.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಮಾತಿಗೆ ಅವರು ಮನ್ನಣೆ ಕೊಡುತ್ತಾರೆ ಅದಕ್ಕೆ ನಾವು ನಿಮಗೆ ಹೇಳುತ್ತಿರುವುದು. ಏಕೆಂದರೆ, ಅನೇಕ ಸಂದರ್ಭಗಳಲ್ಲಿ ಅವರು ಕುಸಿದು ಬೀಳುವಾಗ ಅವರ ರಕ್ಷಣೆಗೆ ತಾವು ಬಂದಿದ್ದೀರಿ. ನಮ್ಮ ರಕ್ಷಣೆಗೂ ಕೂಡ ಬಂದಿದ್ದೀರಿ. ಅನೇಕ ಸಾರಿ ಅವರ ರಕ್ಷಣೆ ಮಾಡಿರುವವರು ನೀವು, ನಿಮ್ಮ ಮಾತು ಅವರು ಕೇಳುತ್ತಾರೆ. ನಿಮ್ಮ ಮಾತು ಕೇಳುವುದಿಲ್ಲವೆಂದರೆ

ಹೇಗೆ ? ಅನೇಕ ಸಾರಿ ಇಲ್ಲಿ ಯಾರು ಇರದಿದ್ದರೂ ಅಧ್ಯಕ್ಷರು ಹೌಸನ್ನು ಅಡ್ಜರ್ನ್ ಮಾಡಿ ಮತ್ತೆ ನಿಮ್ಮನ್ನೆಲ್ಲಾ ಒಂದು ಕಡೆ ಸೇರಿಸಿ, ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟು, ಸಾಕಷ್ಟು ಸಲ ಅವರನ್ನು ರಕ್ಷಣೆ ಮಾಡಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್ : ಅಂಥ ಸ್ಪೀಕರ್ ಇರುವುದರಿಂದಲೇ ನಾನು ಆಗಾಗ ಕುಸಿದು ಬೀಳುವವರ ರೀತಿಯಲ್ಲಿ ನಾಟಕ ಮಾಡುತ್ತಿದ್ದುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಎಲ್ಲದಕ್ಕೂ ಒಂದೇ ಉತ್ತರವನ್ನು ಹೇಳುತ್ತಾರೆ. ಮಾನ್ಯ ಅಧ್ಯಕ್ಷರು ಇದನ್ನು ಗ್ಯಾಂಟ್ ಎಂದು ತಿಳಿದುಕೊಳ್ಳಿ. ಅಧ್ಯಕ್ಷರಿದ್ದಾರೆಂದೇ ಈ ರೀತಿ ನಾನು ಮಾತನಾಡುತ್ತೇನೆಂದು ಹೇಳಿದ್ದಾರೆಂದರೆ, ಸದಾ ನಮ್ಮ ಮೇಲೆ ಆಶೀರ್ವಾದ ಇದೆ ಎಂದು ಅವರು ತಿಳಿದು ಕೊಂಡಿದ್ದಾರೆ. ಏಕೆಂದರೆ, ಇದರ ಮಧ್ಯೆ ಒಂದು ರಾಂಗ್ ಮೆಸೇಜ್ ಹೋಗುವುದು ಬೇಡ. ಅವರು ಇದರಲ್ಲಿ ಇನ್ವಾಲ್ವ್ ಆಗದೇ ಇದ್ದಾಗ, whether this is a viable project, whether people of Bangalore can bear the burden be made clear.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಇವತ್ತೇ ಬಿ.ಡಿ.ಎ. ಬಿಲ್‌ನ್ನು ಮುಗಿಸಿ.

(ಗೊಂದಲ)

5. ಶಾಸಕರುಗಳ ಕ್ಷೇತ್ರಗಳಿಗೆ ಅನುದಾನಕ್ಕೆ ಒತ್ತಾಯ

ಶ್ರೀ ವಾಟಾಳ್‌ನಾಗರಾಜ್(ಚಾಮರಾಜನಗರ) : ಅಧ್ಯಕ್ಷರೇ ಶಾಸಕರಿಗೆ ಅನುದಾನ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಇದು ತಮಗೂ ಮತ್ತು ಸದನದ ಎಲ್ಲಾ ಶಾಸಕರಿಗೂ ಬಹಳ ಪ್ರಾಮುಖ್ಯವಾದದು. ಕೊನೇಪಕ್ಷ ಮಾನ್ಯ ಮುಖ್ಯಮಂತ್ರಿಗಳು ಒಂದು ರೂಪಾಯಿಯನ್ನಾದರೂ ಕೊಡುತ್ತೇವೆಂದು ಹೇಳಬೇಕು. ಇದನ್ನು ಈ ಸಾರಿಯಿಂದಲೇ ಕೊಡುತ್ತೇವೆಂದು ತಾವು ಹೇಳಬೇಕೆಂದು. ನಾನು ಬಹಳ ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡದಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ. ಶಾಸಕರಿಗೆ ಅನುದಾನ ಕೊಡತಕ್ಕಂಥದ್ದು ಬಹಳ ಪ್ರಮುಖವಾದಂತಹ ವಿಷಯವಾಗಿದೆ ಮತ್ತು ಇವತ್ತು ಪಾರ್ಲಿಮೆಂಟರಿ ಸದಸ್ಯರಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ನಮಗೆ ಕನಿಷ್ಟಪಕ್ಷ ಒಂದು ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಕೊಡುವುದಕ್ಕೆ ಆಗುವುದಿಲ್ಲವೆಂದರೆ, ನಿಜವಾಗಿಯೂ ಸರ್ಕಾರಕ್ಕೆ ಶಾಸಕರ ಬಗ್ಗೆ, ಕಾಳಜಿ ಇಲ್ಲ ಎಂಬುದು ಗೊತ್ತಾಗುತ್ತದೆ. ನಾನು ಎಲ್ಲಾ ಪಕ್ಷದ ಪರವಾಗಿ ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಬಹಳ ಅನ್ಯಾಯ.

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಮುಖ್ಯಮಂತ್ರಿಗಳು ಕನಿಷ್ಟಪಕ್ಷ ಒಂದು ರೂಪಾಯಿಯನ್ನಾದರೂ ಕೊಡುತ್ತೇವೆಂದು ಘೋಷಣೆ ಮಾಡಬೇಕು.

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ತಾವು ಅತ್ಯಂತ ಪರಿಣಾಮಕಾರಿಯಾಗಿ ತಮ್ಮ ವಾದವನ್ನು ಮಂಡಿಸಿದ್ದೀರಿ ಮತ್ತು ಸರ್ಕಾರವನ್ನು ಮನವೊಲಿಸತಕ್ಕಂಥ ಪ್ರಯತ್ನವನ್ನು ಮಾಡಿದ್ದೀರಿ ಹಾಗೂ